(ಉ) ಸುಸಜ್ಜಿತ ಕ್ರೀಡಾಂಗಣವನ್ನು ಒದಗಿಸಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ಮತ್ತು ಈ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಸರ್ಕಾರದವರಿಗೆ ಇನ್ನೂ ಎಷ್ಟು ಕಾಲಾವಕಾಶ ಬೇಕಾಗಿದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಖಾಲಿ ಇರುವ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗ ಮತ್ತು ಜಿಲ್ಲಾ ನೇಮಕಾತಿ ಸಮಿತಿಗಳು ನೇಮಕಾತಿ ಸಮಿತಿಗಳು ನೇಮಕಾತಿ ಮಾಡಬೇಕಾಗುತ್ತವೆ. ಜಿಲ್ಲಾ ನೇಮಕಾತಿ ಸಮಿತಿಗಳನ್ನು ಇದೀಗ ರಚಿಸಲಾಗಿದೆ. ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಖಾಲಿ ಇರುವ ಹುದ್ದೆಗೆ ೀಘ್ರದಲ್ಲಿಯೇ ನೇಮಕಾತಿ ಮಾಡುವ ನಿರೀಕ್ಷೆ ಇದೆ.

(ಆ) ಶಾಲೆಗಳಲ್ಲಿ ಈ ಅನುಕೂಲತೆಗಳು ಸಾಕಷ್ಟು ಪ್ರಮಾಣದಲ್ಲಿಲ್ಲ.

(ಇ) ಹಣಕಾಸಿನ ಅನುಕೂಲತೆಯನ್ನು ಅವಲಂಬಿಸಿ ಹಂತ-ಹಂತದಲ್ಲಿ ಅಗತ್ಯತೆಗಳನ್ನು ಪೂರೈಸಲು ಪರಿಶೀಲಿಸಬೇಕಾತ್ತದೆ.

(ಈ) ೧೪ ಆಟದ ಮೈದಾನಗಳು ಇವೆ.

(ಉ) -ಡಿಟೋ-

ಅರಸೀಕೆರೆ ಕ್ಷೇತ್ರದಲ್ಲಿ ೧೯೮೧-೮೨, ೧೯೮೨-೮೩ ಸಾಲಿಂಗಳಲ್ಲಿ ಕೂಲಿಗಾಗಿಕಾಳು ಯೋಜನೆಯಲ್ಲಿ ಕಟ್ಟಿಸಿರುವ ಪಾಠಶಾಲೆಗಳು

೨೯ (೩) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಅರಸೀಕೆರೆ ಕ್ಷೇತ್ರದಲ್ಲಿ ೧೯೮೧-೮೨, ೮೨-೮೩ರಲ್ಲಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಕಟ್ಟಿಸಿರುವ ಪಾಠಶಾಲೆಗಳ ಸಂಖ್ಯೆ ಎಷ್ಟು ?

(ಆ) ಅವುಗಳಲ್ಲಿ ಶಿಥಿಲವಾಗಿರುವ ಪಾಠಶಾಲೆಗಳ ಸಂಖ್ಯೆಗಳು ಎಷ್ಟು ಮತ್ತು ಶಿಥಿಲವಾಗಲು ಕಾರಣಗಳೇನು ?

(ಇ) ಈಗಿನ ಪರಿಸ್ಥಿತಿಯಲ್ಲಿ ಕಟ್ಟಿಸಿರುವ ಕಟ್ಟಡಗಳಲ್ಲಿ ಪಾಠಶಾಲೆ ನಡೆಸಲು ಸಾಧ್ಯವಿದೆಯೇ ?

(ಈ) ಹಾಗಿದ್ದರೆ ಈ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಇ.ಹೆಚ್.ಎಸ್.—ಇಲ್ಲ. ಇ.ಎ.ಎಸ್.—೯.

(ಆ) ಇಲ್ಲ.

(ಇ) ಇದೆ.

(ಈ) ೯.

ರಾಜ್ಯದಲ್ಲಿ ಖಾಲಿ ಇರುವ ಗ್ರಂಥಪಾಲಕರ ಹುದ್ದೆಗಳು

೮೦ (೪೮) ಶ್ರೀ ಜೆ. ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಗ್ರಂಥಪಾಲಕರ ಹುದ್ದೆಗಳು ಹಾಗೂ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಖಾಲಿ ಇರುವುದು ನಿಜವೇ ?

(ಆ) ಹಾಗಿದ್ದರೆ, ಗ್ರಂಥಾಪಾಲಕರ ಕೊರತೆ ಏನಾದರೂ ಇದೆಯೆ ?

(ಇ) ಹಾಗಿಲ್ಲದಿದ್ದಲ್ಲಿ ಇದುವರೆವಿಗೂ ಖಾಲಿ ಜಾಗಗಳನ್ನು ತುಂಬದಿರಲು ಕಾರಣಗಳೇನು ?

(ಈ) ಈಗ ಹಾಲಿ ಇದ್ದ ಖಾಲಿ ಜಾಗಗಳು ಎಷ್ಟು ? ಅವುಗಳನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ನಿಜ.

(ಆ) ಇಲ್ಲ.

(ಇ) ಒಟ್ಟು ೭.

(ಈ) 'ಎ' ಮತ್ತು 'ಬಿ' ಗುಂಪಿನ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಈಗ ಇಲಾಖಾ ನೇಮಕಾತಿ ಸಮಿತಿ ರಚನೆಯಾಗಿದ್ದು 'ಸಿ' ಗುಂಪಿನ ನೇರ ನೇಮಕಾತಿ ಹುದ್ದೆಗಳನ್ನು ಇಲಾಖೆಯು ತುಂಬುವ ಕ್ರಮ ತೆಗೆದುಕೊಳ್ಳಲಾಗುತ್ತದೆ. ಹಾಗೂ ಸೇವಾ ಹಿರಿತನದ ಪಟ್ಟಿ ಪೂರ್ಣವಾದ ಮೇಲೆ ಗ್ರಂಥಪಾಲಕರ, ಅಧೀಕ್ಷಕರ ಹುದ್ದೆಗಳನ್ನು ಭಡ್ತಿ ಮೂಲಕ ಇಲಾಖೆಯು ತುಂಬಲಾಗುವುದು. 'ಡಿ' ಗುಂಪಿನ ಹುದ್ದೆಗಳನ್ನು ಉದ್ಯೋಗ ವಿನಿಮಯ ಇಲಾಖೆಯಿಂದ ಪಟ್ಟಿಯನ್ನು ತರಿಸಿ ತುಂಬಲಾಗುವುದು.

Dearth of verterinary Hospitals in Rural Areas

41 (54) SRI J.S. DODDMETI (Ron).—

(a) Has it come to the notice of Government that there is dearth of Veterinary Hospitals in Rural Areas

(b) if so action taken by Government.

(c) to overcome this scarcity, is there any suggestion before Government to start Mobile Verterinary Clinics.

(d) if so, action taken taken by Government.

SRI VISWANATHA REDDY MUDANAL. (Minister for Animal Husbandary, Veternary Services and Horticulture).

(a) Yes. Sir.

(b) Within the resources available Government has been sanctioning Rural Veterinary Dispensaries every year taking into consideration the needs of the areas concerned.

(c) Mobile Veterinary Clinics have already been established to intensify the coverage and help the beneficiaries under DRDS, DPAR. Intergrated Rural Development of Western Ghats and CADA.

(d) In view of the replies to (c) this does not arise.

ಬರಗಾಲಕ್ಕೆ ತುತ್ತಾದ ಬೀದರ್ ಜಿಲ್ಲೆಗೆ ಕುಡಿಯುವ ನೀರನ್ನೊದಗಿಸುವುದು

೪೨ (೧೬) ಶ್ರೀ ಭೀಮಣ್ಣ ಖಂಡ್ರೆ (ಬಾಲ್ಕಿ)—ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಎ) ಹತ್ತುವರ್ಷಗಳಿಂದಲೂ ಬೀದರ್ ಜಿಲ್ಲೆಯು ಬರಗಾಲಕ್ಕೆ ತುತ್ತಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಬಿ) ಬೀದರ್ ಜಿಲ್ಲೆಯಲ್ಲಿ ಮಾರ್ಚಿ ೮೩ ರಿಂದ ಜೂನ್ ೮೩ರ ವರೆಗೆ ನೀರಿನ ಕೊರತೆಯನ್ನು ಎದುರಿಸಿದ ಹಳ್ಳಿಗಳ ಸಂಖ್ಯೆ ಎಷ್ಟು (ತಾಲೂಕುವಾರು ಗ್ರಾಮಗಳ ಸಂಖ್ಯೆಯನ್ನು ತಿಳಿಸುವಿರಾ) ?